ಕವಿತೆ



ಟಿ.ಎಚ್.ಲವಕುಮಾರ್

ಕಲೆ: ಮುರಳೀಧರ್ ರಾಥೋಡ್



# ಬಸಿರ ಬಯಕೆಯ ಹಾಡು

ಕೆಂಪೇಗೌಡ ರಸ್ತೆಯ ಸರಿದಾರಿಯ
ಕೆಳಗಿಳಿದು ಸಾಗಿದರೆ ದಂಡಿ ದಂಡಿಯಾಗಿ
ಸಿಗುತ್ತಾರೆ ನಗುವ ಬುದ್ಧರು

ಲೋಹಕ್ಕನುಗುಣವಾಗಿ ತೂಕಕ್ಕನುಗುಣವಾಗಿ
ಆಕಾರಕ್ಕನುಗುಣವಾಗಿ ರೂಪಕ್ಕನುಗುಣವಾಗಿ
ಸೇಲಿಗಿಡಲಾಗಿದೆ ಆ ತಥಾಗತ ಸಾಕ್ಯ ಮುನಿಯನ್ನು

ನೆಲದೊಡಲ ಬಗೆದು ತೆಗೆದ ಸಂಪತ್ತಿನಿಂದ ಸೊಕ್ಕಿದ
ಸಿರಿವಂತರ ಮನೆಯಲ್ಲಿ ಹೇಗೋ ಹಾಗೆಯೇ
ಹಿಡಿ ಕೂಳಿಗೆ ಹಗಲಿರುಳು ರಕ್ತ ಬಸಿಯುವ
ಶ್ರಮಿಕರ ಮನೆಯಲ್ಲೂ ನಗುವನಂತೆ ಈ ಗೌತಮ

ಥರಾವರೀ ಎರಕಗಳಲ್ಲಿ ತಯಾರಾದ ಇವನು
ಸೇಲಾಗುತ್ತಾನೆ ಸಾವಿರ ಬೆಲೆಯ ನೋಟುಗಳಿಗೆ
ಅಯ್ಯೋ ದೇವರೇ ಈ ಅಸಂಖ್ಯ ಲೋಹಮುದ್ದೆಗಳಲ್ಲಿ
ಹೇಗೆ ಆರಿಸಲಿ ಯಾವ ಅಳತೆಗೂ ನಿಲುಕದ ಸಿದ್ಧನನ್ನು?

ಆಸೆಗಳ ಹತ್ತಿಕ್ಕಿ ಅಪರಾತ್ರಿ ಮನೆಬಿಟ್ಟು
ಮುದ್ದು ಮಡದಿಯ ಹಾಲು ಹಸುಳೆಯ
ಹಾಸಿಗೆಯಲ್ಲೇ ಬಿಟ್ಟು ಜಗದ ನೆಮ್ಮದಿಯ
ಹುಡುಕುತ್ತಾ ಹೊರಟನಲ್ಲಾ ಆ ಕಡು ದುಃಖಿ
ಆ ಅಂಥವನನ್ನು ಕಾಣಬಹುದೇ ಈ ಇಂಥ ನಾನು
ಈ ಸಂಡೇ ಬಜಾರುಗಳಲ್ಲಿ ಬಣ್ಣ ಬಣ್ಣದ ಮಾಲುಗಳಲ್ಲಿ?

ಆಗದಿದ್ದರೆ ಆ ಮಹಾರಾತ್ರಿಯ ಆ ಮಹಾ ನಿಷ್ಕ್ರಮಣ
ಅದೆಷ್ಟು ಯಶೋಧರೆಯರು ಬೀದಿ ಪಾಲಾಗುತ್ತಿದ್ದರು
ಅದೆಷ್ಟು ರಾಹುಲರು ಅರಿವುಗೇಡಿಗಳಾಗಿ ಅಲೆದಾಡುತ್ತಿದ್ದರು
ನಿಕೇತನವ ತೊರೆದಲ್ಲದೆ ಆಗಬಹುದಿತ್ತೇ ಅವನು ಅನಿಕೇತನ?

ಬುದ್ಧನೆಂದರೆ ಅಗಾಧ ಕಡಲು ಆವಿಯಾಗಿ
ನಿಂತ ಬಾನು
ಬುದ್ಧನೆಂದರೆ ಕರುಣೆಯೇ ಟಿಸಿಲೊಡೆದ
ಅನಂತ ಕಾನು
ಬುದ್ಧನೆಂದರೆ ಭೂಮಿತಾಯಿಯ ಬಸಿರ
ಬಯಕೆಯ ಹಾಡು
ಒಲವಿನಿಂದಲ್ಲದೆ ಅದನು ಹಾಡಬಹುದೆ
ಎಂದಾದರು ನಾನು?